# ವಿಶ್ವ ಗ್ರಂಥಸೂಚಿಯಲ್ಲಿ ಕನ್ನಡ ಪುಸ್ತಕಗಳಿಲ್ಲ! *

**ಸಾರಾಂಶ:** OCLC ಯ ಕನ್ನಡ ಆನ್‍ಲೈನ್ ಗ್ರಂಥಸೂಚಿ worldcat ನಲ್ಲಿ ವಿಶ್ವದ ಅನೇಕ ಇಂಗ್ಲೀಷ್, ಇಂಗ್ಲೀಷೇತರ ಭಾಷಾ ಪುಸ್ತಕಗಳೂ,  ಭಾರತೀಯ ಭಾಷೆಗಳಾದ ಹಿಂದಿ, ತಮಿಳು, ಮರಾಠಿ, ಬಂಗಾಳಿ ಮತ್ತಿತರ ಭಾಷೆಗಳ ಸುಮಾರು ಐದು ಕೋಟಿ ಪುಸ್ತಕಗಳ ವಿವರಗಳಿವೆ. ಈ ಗ್ರಂಥಸೂಚಿಯಲ್ಲಿ ಒಂದೂ ಕನ್ನಡ ಪುಸ್ತಕವಿಲ್ಲದಿರುವುದು ವಿಪರ್ಯಾಸ. ಒಂದು ಕನ್ನಡ ಪುಸ್ತಕಗಳ ಸಮಗ್ರ ಗ್ರಂಥಸೂಚಿಯನ್ನು ತಯಾರಿಸಿ worldcat ನಲ್ಲಿ ಸೇರಿಸುವ ಹೊಣೆಗಾರಿಕೆ ಅಧಿಕೃತವಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯದ್ದಾದರೂ ಅದರ ಕರ್ತವ್ಯಲೋಪದೊಂದಿಗೆ, ಲೇಖಕರ, ಪ್ರಕಾಶಕರ, ವಿತರಕರ ಅಸಹಕಾರದಿಂದಾಗಿ ಈ ಕಾರ್ಯದಲ್ಲಿ ಪ್ರಗತಿಯಿಲ್ಲವಾಗಿದೆ. ಈ ಹಿಂದೆ ಇಂತಹ ಗ್ರಂಥಸೂಚಿ ತಯಾರಿಗಾಗಿ ಮೈಸೂರು ವಿಶ್ವವಿದ್ಯಾಲಯ ಮತ್ತಿತರ ಸಂಸ್ಥೆಗಳಿಂದ ಕೆಲಸಗಳಾಗಿವೆಯಾದರೂ ಅದನ್ನು ಸಮರ್ಥವಾಗಿ ಮುಂದುವರಿಸದಿದ್ದುದರ ಪರಿಣಾಮ ಸಮಗ್ರ ಗ್ರಂಥಸೂಚಿಯ ಕೊರತೆ ಇದೆ. ಗ್ರಂಥಾಲಯ ಕಾಯ್ದೆಯನ್ವಯ ಪ್ರಕಟಗೊಂಡ ಪ್ರತಿ ಪುಸ್ತಕದ ಮೂರು ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯಕ್ಕೆ ತಲುಪಿಸಬೇಕು. ಇದರ ಹಿಂದಿನ ಉದ್ದೇಶ ಸಮಗ್ರ ಗ್ರಂಥಸಂಗ್ರಹಣೆ. ಈ ಕಾಯ್ದೆಯ ಕಟ್ಟುನಿಟ್ಟಾದ ಅನುಷ್ಠಾನ ಹಾಗೂ ಲೇಖಕರು ಮತ್ತು ಪ್ರಕಾಶಕರಿಗೆ  ಉತ್ತೇಜನವಿದ್ದಿದ್ದರೆ ಸಮಗ್ರ ಗ್ರಂಥಸೂಚಿ ಹಾಗೂ ಸಮಗ್ರ ಗ್ರಂಥಸಂಗ್ರಹಣೆ ಸಾದ್ಯವಾಗುತ್ತಿತ್ತು. ಇಂತಹ ಯೋಜನೆಯಿಂದ ಮಾತ್ರ ಕನ್ನಡ ಪುಸ್ತಕಗಳೆಲ್ಲವುಗಳ ವಿವರಗಳನ್ನು ಒಂದೆಡೆ ಸೇರಿಸಲು ಸಾಧ್ಯ ಮತ್ತು ಅದನ್ನು ವಿಶ್ವಗ್ರಂಥಸೂಚಿಯ ಭಾಗವಾಗಿಸಿ ವಿಶ್ವಾದ್ಯಂತ ಎಲ್ಲರಿಗೂ ಇಂಟರ್‌ನೆಟ್ ಮೂಲಕ ದೊರಕಿಸಲು ಸಾದ್ಯ.

**Abstract:** WorldCat, an online catalogue from OCLC covers details of 5 Crore books in English as well as non-English and Indian languages like Hindi, Tamil, Marathi, Bengali, etc. Surprisingly, such a huge catalog does not include even a single Kannada book. The Department of Public Libraries of Government of Karnataka  has to take the responsibility of preparing a comprehensive catalog of Kannada books and include them in WorldCat. Efforts were made earlier by institutions like Mysore University to build such a comprehensive catalog, but failure to continue the efforts to update it has resulted in non availability of a comprehensive catalog of Kannada books. As per Public Library Act, three copies of all books published in the State have to be deposited in the State Central Library to facilitate building a comprehensive catalog as well as developing a comprehensive reference collection of Kannada books. Development of such a catalog and collection with the co-operation of authors, publishers and distributors makes it possible to include Kannada books in WorldCat which would incidentally benefit numerous users all over the world in the Internet.

**Keywords:** WorldCat; Kannada books; Public libraries;

---

OCLC (Online Computer Library Centre) ಎಂಬ ಒಂದು ಅಂತರ ರಾಷ್ಟ್ರೀಯ ಮಟ್ಟದ ಸಂಪನ್ಮೂಲ ಹಂಚಿಕೆ (resource sharing) ಒಕ್ಕೂಟ ಸುಮಾರು 86 ರಾಷ್ಟ್ರಗಳ 2020 ಗ್ರಂಥಾಲಯಗಳ ನೇರ ಸಂಪರ್ಕಿತ (online) ಗ್ರಂಥ ದತ್ತಾಂಶಗಳನ್ನ ಅಥವ ಗ್ರಂಥ ಸೂಚಿಗಳನ್ನ ಒಟ್ಟುಗೂಡಿಸಿ ನಿರಂತರವಾಗಿ ವಿಶ್ವದಾದ್ಯಂತ 'world cat' ಎಂಬ ಹೆಸರಿನಲ್ಲಿ 458 ಭಾಷೆಗಳ ಸುಮಾರು 5 ಕೋಟಿ ವಿಭಿನ್ನ (unique) ಗ್ರಂಥಗಳ ವಿವರಣೆಗಳನ್ನು ಕ್ಷಣಾರ್ದದಲ್ಲಿ ಓದುಗರು ಪರಿಗಣಿಸಲು ಅನುವು ಮಾಡಿಕೊಟ್ಟಿದೆ. ಕುತೂಹಲದ ಸಂಗತಿ ಎಂದರೆ ಈ 'ವಿಶ್ವ ಗ್ರಂಥ ಸೂಚಿ' ಯಲ್ಲಿ ಸುಮಾರು 2 ಕೋಟಿ ಪುಸ್ತಕಗಳು ಇಂಗ್ಲಿಷೇತರ ಭಾಷೆ ಗ್ರಂಥಗಳಿಗೆ ಸಂಬಂದಪಟ್ಟಿದ್ದು, ಯೂರೋಪಿನ ಜರ್ಮನ್, ಫ್ರೆಂಚ್, ಇತ್ಯಾದಿ ಭಾಷೆಗಳಲ್ಲಿ ಪ್ರತಿ ಭಾಷೆಗೆ 20 ರಿಂದ 30 ಲಕ್ಷ ಪುಸ್ತಕಗಳ ವಿವರಣೆ ಇದೆ. ಏಷ್ಯಾದ ಭಾಷೆಗಳಾದ ಚೀಣಿ ಮತ್ತು ಜಪಾನಿ ಕೂಡ ಲಕ್ಷಗಟ್ಟಲೆ ಪುಸ್ತಕಗಳ ವಿವರಣೆಯನ್ನು ವಿಶ್ವ ಗ್ರಂಥ ಸೂಚಿಗೆ ಒದಗಿಸಿವೆ. ಇನ್ನು ಭಾರತೀಯ ಭಾಷೆಗಳಲ್ಲಿ ಹಿಂದಿ ಅತೀ ಹೆಚ್ಚು ಅಂದರೆ ಸುಮಾರು 65 ಸಾವಿರ ಪುಸ್ತಕಗಳ ವಿವರಣೆಯನ್ನು ಮತ್ತು ಎರಡನೇ ಸ್ಥಾನದಲ್ಲಿರುವ ತಮಿಳು 52 ಸಾವಿರ ಪುಸ್ತಕಗಳ ವಿವರಣೆಯನ್ನು ದೊರಕಿಸಿಕೊಟ್ಟರೆ, ಮರಾಠಿ, ಬಂಗಾಳಿ, ಮತ್ತಿತರ ಭಾರತೀಯ ಭಾಷಾ ಪುಸ್ತಕಗಳೂ ಸಾವಿರ ಗಟ್ಟಲೆ ಇವೆ. ಆದರೆ ಕನ್ನಡ ಪುಸ್ತಕಗಳ ಖಾತೆ ಇನ್ನೂ ತೆರೆಯ ಬೇಕಿದೆ! (ಪಟ್ಟಿ ನೋಡಿ). ಕನ್ನಡ ಅಭ್ಯುದಯಕ್ಕಾಗಿ ಕಂಕಣಭದ್ದವಾದ ಹತ್ತಾರು ಸಂಸ್ಥೆಗಳು, 5 ಕೋಟಿ ಕನ್ನಡಿಗರು ಮತ್ತು ಒಂದು ಲಕ್ಷ ಕನ್ನಡ ಪುಸ್ತಕಗಳ ಪ್ರಕಟಣೆ ಇದ್ದಾಗ್ಯೂ 5 ಕೋಟಿ ಪುಸ್ತಕಗಳ ವಿವರಣೆ ಹೊಂದಿರುವ ವಿಶ್ವಗ್ರಂಥ ಸೂಚಿಯಲ್ಲಿ ಒಂದೂ ಕನ್ನಡ ಪುಸ್ತಕ ನಮೂದಿಸಿಲ್ಲ.

| ವಿಶ್ವ ಗ್ರಂಥ ಸೂಚಿಯಲ್ಲಿ ಭಾರತೀಯ ಭಾಷೆ ಪುಸ್ತಕಗಳು | |
|---|---|
| ತೆಲುಗು | 15,181 |
| ಮರಾಠಿ | 18,982 |
| ಸಂಸ್ಕೃತ | 19,348 |
| ಗುಜರಾತಿ | 19,785 |
| ಬೆಂಗಾಳಿ | 34,347 |
| ಉರ್ದು | 41,910 |
| ತಮಿಳು | 51,777 |
| ಹಿಂದಿ | 64,727 |
| ಮೊತ್ತ | 266,057 |

ಈ ಗ್ರಂಥಾಲಯದ ಒಕ್ಕೂಟಕ್ಕೆ ಸದಸ್ಯರಾಗಿ ಗ್ರಂಥ ವಿವರಣೆ ಒದಗಿಸಿದರೆ ಗ್ರಂಥ ಒಂದರ ವಿವರಣೆಗೆ ಮೂರು ಡಾಲರ್‌ನ್ನ ಸದಸ್ಯರ ಖಾತೆಗೆ ಜಮಾ ಮಾಡಲಾಗುವುದು. ಹಾಗೆಯೆ ಈ ವಿವರಣೆಯನ್ನು ಒಂದು ನಿರ್ದಿಷ್ಟ ಶೈಲಿ (format) ಯಲ್ಲಿ ಪಡೆದರೆ (download ಮಾಡಿದರೆ) ಈ ಖಾತೆಯಿಂದ ಎರಡು ಡಾಲರ್ ತೆರಬೇಕಾಗುತ್ತದೆ. ಆದರೆ ಈ ನಿಟ್ಟಿನಲ್ಲಿ ಉದ್ಭವಿಸುವ ಪ್ರಶ್ನೆ ಈ ಕೆಲಸ ಮಾಡುವವರಾರು ಮತ್ತು ನಮ್ಮಲ್ಲಿ ಕನ್ನಡ ಪುಸ್ತಕಗಳ ಸಮಗ್ರ ಗ್ರಂಥ ಸೂಚಿ ಇದೆಯೆ ಎಂಬುವುದು. ಸಾರ್ವಜನಿಕ ಗ್ರಂಥಾಲಯ ಕಾಯಿದೆ ಮತ್ತು ಗ್ರಂಥಗಳ ಹಕ್ಕು ಕಾಯಿದೆ

ಅನುಷ್ಠಾನಕ್ಕೆ ಬಂದು ಮೂರೂವರೆ ದಶಕಗಳು  ಕಳೆದರೂ ಸಮಗ್ರ ಕನ್ನಡ ಪುಸ್ತಕಗಳ ಸಂಗ್ರಹಣೆ ಮತ್ತು ಸಮಗ್ರ ಗ್ರಂಥ ಸೂಚಿಯನ್ನು ನಾವು ಸಾಧಿಸಲಾಗಿಲ್ಲ.

ಕನ್ನಡದಲ್ಲಿ ಇದುವರೆವಿಗೆ ಸುಮಾರು ೧ ಲಕ್ಷ  ಪುಸ್ತಕಗಳು ಪ್ರಕಟಿಸಿರುವ ಅಂದಾಜಿದ್ದು, ಪ್ರತಿ ವರ್ಷ 1500ರಿಂದ 2000 ಶೀರ್ಷಿಕೆಗಳು ಪ್ರಕಟವಾಗುತ್ತವೆ ಎಂದು ಎಣಿಸಲಾಗಿದೆ. ಹೆಚ್ಚಿನ ಪ್ರಕಾಶಕರು ಪುಸ್ತಕಗಳಲ್ಲಿ ISBN ನಮೂದಿಸುವುದಿಲ್ಲ ಮತ್ತು ಹಕ್ಕು ಕಾಯಿದೆ ಪ್ರತಿಯನ್ನು ನಿರ್ದಿಷ್ಟ ಗ್ರಂಥಾಲಯಗಳಿಗೆ ತಲುಪಿಸುವುದಿಲ್ಲ. ಇದರಿಂದಾಗಿ ಸಮಗ್ರ ಗ್ರಂಥ ಸೂಚಿ ಮತ್ತು ಸಮಗ್ರ ಗ್ರಂಥ ಸಂಗ್ರಹಣೆಗೆ ತೊಡಕಾಗಿದೆ.  ಇದು ಕನ್ನಡ ಪರ ಸಂಸ್ಥೆಗಳ ಅದರಲ್ಲೂ ಕನ್ನಡ ಪುಸ್ತಕ ಪ್ರಧಿಕಾರ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆದ್ಯ ಕರ್ತವ್ಯ. ಮೊದಲನೆಯದಾಗಿ ಸಮಗ್ರ ಕನ್ನಡ ಪುಸ್ತಕಗಳ ಗ್ರಂಥಸೂಚಿ ತಯಾರಿಕೆ ಮತ್ತು ಪ್ರಕಟಣೆ. ಸಮಗ್ರ ಗ್ರಂಥಸೂಚಿ ಯಾವಯಾವ ಗ್ರಂಥಗಳು ಈವರೆವಿಗೆ ಪ್ರಕಟಗೊಂಡಿವೆ (ಪೂರ್ವಾನ್ವಿತ ಸೂಚಿ) ಮತ್ತು ಪ್ರಕಟಗೊಳ್ಳುತ್ತಿವೆ (ಪ್ರಚಲಿತ ಸೂಚಿ) ಎನ್ನುವುದನ್ನು ಒದಗಿಸುವ ಸಮಗ್ರ ಗ್ರಂಥಗಳ ಮಾಹಿತಿ ಸಂಗ್ರಹಣೆ ಮತ್ತು ಗ್ರಂಥವಿವರಣಾ ಹತೋಟಿ (Bibliographical control) ಯ ಸಾಧನ. ಇಂತಹ ಸೂಚಿಗಳಿಂದ ಹಲವಾರು ಇತರ ಪ್ರಯೋಜನಗಳೂ ಇವೆ. ಚಾರಿತ್ರಿಕವಾಗಿ ಇದುವರೆಗಿನ ಕೊಡುಗೆಯನ್ನು ಕ್ರೋಢೀಕರಿಸಲಿಕ್ಕೆ ಮತ್ತು ಪ್ರಕಟಣೆಗಳಲ್ಲಿ ಪುನರಾವರ್ತನೆಗಳನ್ನು ಯಶಸ್ವಿಯಾಗಿ ತಡೆಗಟ್ಟಲಿಕ್ಕೆ ಇವು ಬಹಳ ಉಪಯುಕ್ತ. ಅಂತೆಯೆ ಲೇಖಕರಿಗೆ, ಸಂಶೋಧಕರಿಗೆ ಮತ್ತು ತಜ್ಞರಿಗೆ ಇದುವರೆಗಿನ ಸಾಧನೆಗಳ ಮತ್ತು ಮುಂದೆ ಸಾಧಿಸಬೇಕಾಗಿರುವ ವಿಷಯ ಕ್ಷೇತ್ರಗಳ ಪರಿಶೀಲನೆಗೆ ಮತ್ತು ಪ್ರಕಟಣೆಗಳ ಮೌಲ್ಯೀಕರಣಕ್ಕೆ ಬೇಕಾಗುತ್ತವೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಯಾವೊಂದು ಪ್ರಯತ್ನವನ್ನು ನಡೆಸದಿರುವುದು ಅತೀ ದೊಡ್ಡ ಕರ್ತವ್ಯ ಲೋಪ. ಆದರೆ ಕನ್ನಡ ಪುಸ್ತಕಗಳ ಗ್ರಂಥಸೂಚಿಗಳನ್ನು ತಯಾರಿಸಿ ಪ್ರಕಟಿಸುವಲ್ಲಿ ಇತರರಿಂದ ಕೆಲವು ಸ್ತುತ್ಯಾರ್ಹ ಕಾರ್ಯಗಳಾಗಿವೆ. ಇವುಗಳಲ್ಲಿ ಅತೀ ಮುಖ್ಯವಾದದ್ದು ಮೈಸೂರು ವಿಶ್ವವಿದ್ಯಾಲಯ 1971 ರಲ್ಲಿ ಆರಂಭಿಸಿ 9  ಸಂಪುಟಗಳಲ್ಲಿ ಪ್ರಕಟಿಸಿದ 'ಕನ್ನಡ ಗ್ರಂಥ ಸೂಚಿ'. ಇದು 1817 ರಿಂದ 1968 ರವರೆಗೆ ಪ್ರಕಟಿಸಿದ ಸುಮಾರು 40,000 ಪುಸ್ತಕಗಳ ವಿವರಗಳನ್ನೊಳಗೊಂಡಿದೆ. ಈ ಪೂರ್ವಾನ್ವಯಿತ ಗ್ರಂಥಸೂಚಿಯನ್ನು ಪರಿಷ್ಕರಿಸುವ ಯೋಜನೆಯನ್ನಾಗಲಿ ಅಥವ 1968 ರಿಂದ ಮುಂದಕ್ಕೆ ಪ್ರಕಟವಾದ ಕನ್ನಡ ಪುಸ್ತಕಗಳ ಪ್ರತ್ಯೇಕ ಗ್ರಂಥಸೂಚಿಯನ್ನು ತಯಾರಿಸುವುದರಲ್ಲಾಗಲಿ ಸಂಬಂದಪಟ್ಟ ಸಂಸ್ಥೆಗಳಾವುವೂ ಈವರೆವಿಗೆ ಆಸಕ್ತಿ ಹೊಂದಿಲ್ಲದಿರುವುದು ವಿಷಾದದ ಸಂಗತಿ. ಕನ್ನಡ ಪುಸ್ತಕ ಪ್ರಧಿಕಾರ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯಂತಹ ಸರ್ಕಾರಿ ಸಂಸ್ಥೆಗಳು ಈ ವಿಷಯದಲ್ಲಿ ನಿರ್ಲಿಪ್ತವಾಗಿರುವುದು ಶೋಚನೀಯ. ಮತ್ತೊಂದು ಪೂರ್ವಾನ್ವಿತ ಗ್ರಂಥಸೂಚಿ 'A Catalogue of the Kannada, Badaga and Coorg Books in the Library of British Museum' ಮತ್ತು 1985 ರಲ್ಲಿ ಪ್ರಕಟಿಸಿದ ಇದರ ಸಪ್ಲಿಮೆಂಟರಿ ಕೂಡ ಮುಖ್ಯವಾದವು.  ಪ್ರಚಲಿತ ಗ್ರಂಥಸೂಚಿಗಳಾದ 'ರಾಷ್ಟ್ರೀಯ ಗ್ರಂಥ ಸೂಚಿ' (1958-86, ಕೇಂದ್ರೀಯ ಪರಾಮರ್ಶನ ಗ್ರಂಥಾಲಯ, ಕಲ್ಕತ್ತ), 'ಸಾಹಿತ್ಯ

ವಾರ್ಷಿಕ'(1971-81, ಬೆಂಗಳೂರು ವಿಶ್ವವಿದ್ಯಾಲಯ) ಮತ್ತು 'ಗ್ರಂಥಲೋಕ' (1977-97, ಮೈಸೂರು ವಿಶ್ವವಿದ್ಯಾಲಯ) ನಿಂತುಹೋಗಿವೆ. ಸದ್ಯಕ್ಕೆ ಇತ್ತೀಚೆಗೆ ಆರಂಭಗೊಂಡ ಕನ್ನಡ ವಿಶ್ವವಿದ್ಯಾಲಯದ 'ಪುಸ್ತಕ ಪ್ರಪಂಚ' ಮಾತ್ರ ಲಭ್ಯವಿದೆ. ಒಟ್ಟಿನಲ್ಲಿ ಸಮಗ್ರ ಗ್ರಂಥಸೂಚಿಗಳ ಅಭಾವದಿಂದಾಗಿ ಲೇಖಕರು ಮತ್ತು ಓದುಗರು ಪ್ರಕಟಗೊಂಡಿರಬಹುದಾದ ಪುಸ್ತಕಗಳ ಬಗೆಗಿನ ಮಾಹಿತಿಗಾಗಿ ದಿನಪತ್ರಿಕೆಗಳ ಗ್ರಂಥ ಸ್ವೀಕಾರ ಪಟ್ಟಿ ಮತ್ತು ಕೆಲವೇ ಮಾರಾಟಗಾರರ ಪಟ್ಟಿಯನ್ನಷ್ಟೇ ಅವಲಂಬಿಸಬೇಕಾಗಿದೆ.

ಎರಡನೆಯ ಕರ್ತವ್ಯವೆಂದರೆ ಸಮಗ್ರ ಕನ್ನಡ ಗ್ರಂಥಗಳ ಸಂಗ್ರಹಣೆ.  ಲೇಖಕರು, ಸಂಶೋಧಕರು ಮತ್ತು ಆಸಕ್ತಿಯುಳ್ಳ ನಾಗರೀಕರು ಇದುವರೆವಿಗೆ ಪ್ರಕಟಗೊಂಡ ಕನ್ನಡ ಪುಸ್ತಕಗಳನ್ನು ನೋಡಬೇಕು ಅಥವ ಪರಿಶೀಲಿಸಬೇಕೆಂದರೆ ಸಮಗ್ರ ಗ್ರಂಥಸಂಗ್ರಹಣೆ ರಾಜ್ಯದಲ್ಲಿ ಕನಿಷ್ಠ ಒಂದು ಗ್ರಂಥಾಲಯದಲ್ಲಿಯಾದರೂ ಇದ್ದರೆ ಮಾತ್ರ ಸಾಧ್ಯ. ಮುಂದಿನ ಪೀಳಿಗೆಗಾಗಿ ಮತ್ತು ಪರಾಮರ್ಶನೆಗಾಗಿ ಸಮಗ್ರ ಗ್ರಂಥಸಂಗ್ರಹಣೆ ಅತ್ಯಾವಶ್ಯಕ. ಗ್ರಂಥಗಳ ಇರುವಿಕೆಯ ಬಗ್ಗೆ ಮಾಹಿತಿ ಒದಗಿಸಲು, ಗ್ರಂಥ ವಿವರಣಾ ಹತೋಟಿ (Bibliographical Control) ಹೊಂದಲು ಮತ್ತು ಸಮಗ್ರ ಗ್ರಂಥಸೂಚಿ ತಯಾರಿಸಿ ಪ್ರಕಟಿಸಲು ಸಮಗ್ರ ಗ್ರಂಥ ಸಂಗ್ರಹಣ ಯೋಜನೆಯಿಂದ ಮಾತ್ರ ಸಾದ್ಯ. ಇದೇ ಕಾರಣಕ್ಕಾಗಿ ರಾಜ್ಯದಲ್ಲಿ ಕಾಯಿದೆಯೂ ಇದೆ. ಈ ಕಾಯಿದೆಯನ್ವಯ ಪ್ರಕಟಗೊಂಡ ಪ್ರತೀ ಪುಸ್ತಕದ ಮೂರು ಪ್ರತಿಗಳನ್ನು ರಾಜ್ಯ ಗ್ರಂಥಾಧಿಕಾರಿಗಳಿಗೆ ಪುಕ್ಕಟ್ಟೆಯಾಗಿ ತಲುಪಿಸಬೇಕು. ಈ ಯೋಜನೆ ಬಹಳ ವರ್ಷಗಳಿಂದ ಇದ್ದರೂ ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲಾಗದ್ದರಿಂದ ಇಂದು ಸಮಗ್ರ ಕನ್ನಡ ಪುಸ್ತಕಗಳ ಸಂಗ್ರಹವೇ ಇಲ್ಲ. ಕಾಯಿದೆಯನ್ನು ಅನುಷ್ಠಾನಕ್ಕೆ ತರಲು ಬೇಕಾಗುವ ವ್ಯವಸ್ಥೆ ನಿರ್ಮಾಣ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವುದರ ಜೊತೆಗೆ ಕಾಯಿದೆಯನ್ವಯ ಪಡೆಯುವ ಪ್ರತಿಗಳಿಗೆ ಕನಿಷ್ಠ ಬೆಲೆ ನೀಡುವ, ಸಾರಿಗೆ ಅಥವಾ ಅಂಚೆವೆಚ್ಚ ಭರಿಸುವ ಮತ್ತು ಪ್ರತಿಗಳನ್ನು ಲೇಖಕರು ಅಥವಾ ಪ್ರಕಾಶಕರು ಅವರಿಗೆ ಹತ್ತಿರದ ಯಾವುದಾದರು ಸಾರ್ವಜನಿಕ ಗ್ರಂಥಾಲಯ ಶಾಖೆಗೆ ತಲುಪಿಸಿ ನಗದು ಹಣ ಪಡೆಯುವಂತ ಉತ್ತೇಜಿತ ಕಾರ್ಯಕ್ರಮಗಳನ್ನು ಇಲಾಖೆ ಹಮ್ಮಿಕೊಂಡರೆ ಮಾತ್ರ ಸಮಗ್ರಗ್ರಂಥ ಸಂಗ್ರಹಣೆ ಒಂದು ಸಾರ್ಥಕ ಯೋಜನೆ ಆಗಬಹುದು.

ವ್ಶಿಶ್ವ ಗ್ರಂಥ ದತ್ತಾಂಶದಲ್ಲಿ ಕನ್ನಡ ಪುಸ್ತಕಗಳ ಸೇರ್ಪಡೆಯಿಂದಾಗುವ  ಮತ್ತೊಂದು ಪ್ರಮುಖ ಪ್ರಯೋಜನವೆಂದರೆ ವಿಶ್ವದ ಯಾವುದೇ ಗ್ರಂಥಾಲಯ ಅಥವ ಸಂಸ್ಥೆ ಕನ್ನಡ ಪುಸ್ತಕಗಳನ್ನು ಅವಲೋಕಿಸುವುದರೊಂದಿಗೆ ಅವುಗಳ ಸರಿಯಾದ ವಿವರಣೆಯನ್ನು ಒಂದೆಡೆ ಪಡೆಯಬಹುದು ಮತ್ತು ಬೇಕಾದ ವಿವರಣೆಗಳನ್ನು ಯಥಾವತ್ತಾಗಿ ಪಡೆದು (download ಮಾಡಿ) ತಮ್ಮ ದತ್ತಾಂಶಗಳಿಗೆ ಸುಲಭವಾಗಿ ಸೇರಿಸಿ ಕೊಳ್ಳುವುದರ ಮೂಲಕ ತಮ್ಮ ಗ್ರಂಥ ಸಂಗ್ರಹಣದ ಗಣಕೀಕರಣವನ್ನು ಸುಲಭವಾಗಿ ಮತ್ತು ಶೀಘ್ರವಾಗಿ ಪೂರೈಸಬಹುದಾಗಿದೆ.

ಗ್ರಂಥಋಣ:

OCLC annual report 2001/2002. Ohio: OCLC, 2002.

PS ಟಿಪ್ಪಣಿ: 'ವಿಶ್ವ ಗ್ರಂಥಸೂಚಿಯಲ್ಲಿ ಕನ್ನಡ ಪುಸ್ತಕಗಳಿಲ್ಲ!' ಎಂಬ ನನ್ನ ಪತ್ರ (ಪ್ರಜಾವಾಣಿ, ೨೬.೦೨.೦೩) ಮತ್ತು ಮೈಸೂರು ವಿಶ್ವ ವಿದ್ಯಾಲಯದ ಶ್ರೀಮಾನ್ ಬಾ. ವೇ. ಶ್ರೀಧರ್ ಅವರ 'ಕನ್ನಡ ಪುಸ್ತಕ ವಿವರ ಕೊಡಿ' ಪತ್ರ (ಪ್ರಜಾವಾಣಿ, ೦೧.೦೩.೦೩) ಗಳಿಗೆ ಸಂಬಂದಿಸಿದಂತೆ ಎರಡು ಮಾತು. ಸುಮಾರು ೩೨ ವರ್ಷಗಳ ಹಿಂದೆ ೧೮೧೭ ರಿಂದ ೧೯೬೮ರ ವರೆವಿಗೆ ಪ್ರಕಟವಾದ ೪೦೦೦೦ ಕನ್ನಡ ಪುಸ್ತಕಗಳ ಗ್ರಂಥಸೂಚಿಯನ್ನು ೯ ಸಂಪುಟಗಳಲ್ಲಿ ಪ್ರಕಟಿಸಿದ ಮೈಸೂರು ವಿಶ್ವ ವಿದ್ಯಾಲಯವೇ ಕನ್ನಡ ಪುಸ್ತಕಗಳ ವಿವರಣೆಯನ್ನೂ OCLC ಯ 'ವಿಶ್ವ ಗ್ರಂಥ ಸೂಚಿ' ಗೆ ಸೇರಿಸಲು ಮುಂದಾಗಿರುವುದು ಸಂತೋಷದ ಸಂಗತಿ. ಆದರೆ ದಯಮಾಡಿ ೧೯೬೮ ರಿಂದ ಇಂದಿನವರೆವಿಗೆ ಪ್ರಕಟಗೊಂಡಿರಬಹುದಾದ ಸುಮಾರು ೬೦,೦೦೦ ಕನ್ನಡ ಪುಸ್ತಕಗಳನ್ನೂ ಸಾದ್ಯವಿದ್ದ ಮಟ್ಟಿಗೆ ಪುಸ್ತಕಗಳನ್ನು ನೇರ ಪರಿಶೀಲಿಸಿ ಒಂದು standard format (MARC 21) ನಲ್ಲಿ ಸಿದ್ಧಪಡಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಿ. ಈ ರೀತಿ ತಯಾರಿಸಿದ ಒಂದು ಲಕ್ಷ ಕನ್ನಡ ಪುಸ್ತಕಗಳ standard format ವಿವರಣೆಯನ್ನು ಹೊಂದಿದ ಸಮಗ್ರ ಕನ್ನಡ ಗ್ರಂಥಸೂಚಿಯನ್ನು ವಿಶ್ವಗ್ರಂಥಸೂಚಿಯಲ್ಲಿ ಅಳವಡಿಸುವುದರ ಜೊತೆಗೆ compact disc (CD) ರೂಪದಲ್ಲಿ ಪ್ರಕಟಿಸಿದರೆ ನೂರಾರು ಗ್ರಂಥಾಲಯಗಳು ಲಕ್ಷಾಂತರ ರೂ. ವೆಚ್ಚದಲ್ಲಿ ಪದೇಪದೇ ಅದೇ ಪುಸ್ತಕಗಳ ವಿವರಣೆಯನ್ನು ತಮ್ಮ ಗಣಕೀಕೃತ ದತ್ತಾಂಶದಲ್ಲಿ ಸೇರಿಸಲು ವ್ಯಯಿಸುತ್ತಿರುವ ಹಣ ಮತ್ತು ವೇಳೆ ಉಳಿಸಬಹುದಾಗಿದೆ. ಮತ್ತು ಇ–ಆಡಳಿತ ಅಳವಡಿಕೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರ್ಕಾರ ಇಂತಹ ಕನ್ನಡ ಪುಸ್ತಕಗಳ ದತ್ತಾಂಶವನ್ನು ಸುಲಭವಾಗಿ ತನ್ನ ಗಣಕಯಂತ್ರ ಜಾಲದಲ್ಲಿ ರಾಜ್ಯಾದ್ಯಂತ ಪಸರಿಸಲು ಅನುವು ಮಾಡಿಕೊಡಲೂ ಬಹುದಾಗಿದೆ.

---

*ವಿಜಯ ಕರ್ನಾಟಕ, ಮಾರ್ಚ್ ೭, ೨೦೦೩, ಕನ್ನಡ ಸಾಹಿತ್ಯ ಸಮ್ಮೇಳನ ವಿಶೇಷ, ಪು.೨. (No kannada books in Worldcat ! Vijaya Karnataka, March 7, 2003, Special Issue on Kannda Sahithya Sammelana, p2).

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ

ಗ್ರಂಥಾಲಯಗಳಲ್ಲಿ  ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ.  ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **; Phone:** 91-80-25084451; **Fax:** 91-80-25084475.